ಸಂಸ್ಕರಣೆ ಮಾಡಿ ಸೂಜಿ, ಸಿರಿಂಜ್‌ಗಳನ್ನು ಮತ್ತು ಉಪಕರಣಗಳನ್ನು ಬಳಸಲು ಸೂಚಿಸಲಾಗಿದೆ.

ವಿಷಯ :- ಧಾರವಾಡ ಜಿಲ್ಲೆಯಲ್ಲಿ ಸರ್ಕಾರಿ ಕಾಲೇಜುಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1003 (1811)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು? ಅವುಗಳು ಯಾವುವು? (ತಾಲ್ಲೂಕುವಾರು ವಿವರ ನೀಡುವುದು)

ಆ) ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಪದವಿ ಕಾಲೇಜುಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರಿ ಪದವಿ ಕಾಲೇಜುಗಳನ್ನು ತೆರೆಯಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 10 ಸರ್ಕಾರಿ ಪದವಿ ಕಾಲೇಜುಗಳಿವೆ. ಅವುಗಳು ಯಾವುವೆಂದರೆ :-

1) ಶ್ರೀ ಸಿದ್ದೇಶ್ವರ ಸರ್ಕಾರಿ ಮಹಾವಿದ್ಯಾಲಯ, ನರಗುಂದ (ಧಾರವಾಡ ತಾಲ್ಲೂಕು).
2) ಸರ್ಕಾರಿ ಕಾಲೇಜು ಹಿರೇಕೆರೂರು (ಧಾರವಾಡ ತಾ:)
3) ಸರ್ಕಾರಿ ಕಾಲೇಜು, ಸವಣೂರು (ಧಾರವಾಡ ತಾ:)
4) ಸರ್ಕಾರಿ ಕಾಲೇಜು, ಗಜೇಂದ್ರಗಡ್ (ರೋಣ ತಾ:)
5) ಸರ್ಕಾರಿ ಕಾಲೇಜು, ಅಕ್ಕಿಆಲೂರು (ಹಾನಗಲ್ ತಾ:)
6) ಸರ್ಕಾರಿ ಕಾಲೇಜು, ಶಿರಹಟ್ಟಿ (ಶಿರಹಟ್ಟಿ ತಾ:)
7) ಸರ್ಕಾರಿ ಕಾಲೇಜು, ಅಳ್ನಾವರ (ಧಾರವಾಡ ತಾ:)
8) ಸರ್ಕಾರಿ ಕಾಲೇಜು, ಗುಡಿಗೇರಿ (ಕುಂದಗೋಳ ತಾ:)
9) ಸರ್ಕಾರಿ ಕಾಲೇಜು, ಬಂಕಾಪುರ (ಶಿಗ್ಗಾಂವ ತಾ:)
10) ಸರ್ಕಾರಿ ಕಾಲೇಜು, ರೋಣ (ರೋಣ ತಾ:)

ಆ) ಬಂದಿದೆ.

ಇ) ಖಾಸಗಿ ಮತ್ತು ಅನುದಾನಿತ ಕಾಲೇಜುಗಳು ವಿದ್ಯಾರ್ಥಿಗಳ ಬೇಡಿಕೆಯನ್ನು ಪೂರೈಸುತ್ತಿವೆ. ಸಧ್ಯದ ಕಠಿಣ ಆರ್ಥಿಕ ಸ್ಥಿತಿಯಿಂದಾಗಿ ಸರ್ಕಾರಿ ಕಾಲೇಜನ್ನು ಸ್ಥಾಪಿಸಲು ಸಾಧ್ಯವಿಲ್ಲ.

ವಿಷಯ:– ರಾಜ್ಯದಲ್ಲಿನ ಪ್ರೌಢ ಶಾಲೆಗಳಲ್ಲಿನ ಅರೆಕಾಲಿಕ ಹಿಂದಿ ಶಿಕ್ಷಕರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1007 (1894)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರೌಢಶಾಲೆಗಳಲ್ಲಿ ಮಂಜೂರು ಆಗಿರುವ ಹಿಂದಿ ಅರೆ-ಕಾಲಿಕ ಶಿಕ್ಷಕರ ಸಂಖ್ಯೆ .ಎಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಈ ಹುದ್ದೆಗಳನ್ನು ಪೂರ್ಣಕಾಲಿಕ ಹುದ್ದೆಗಳನ್ನಾಗಿ ಪರಿವರ್ತಿಸಲು ಸರ್ಕಾರ ದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) 526

(ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.)

ಆ) ರಾಜ್ಯದ ಪ್ರೌಢ ಶಾಲೆಗಳಲ್ಲಿ ಅರೆಕಾಲಿಕ ಹಿಂದಿ ಶಿಕ್ಷಕರ ಹುದ್ದೆಯನ್ನು ಪೂರ್ಣಕಾಲಿಕವಾಗಿ ಪರಿವರ್ತಿಸುವ ಬಗೆಗೆ ಪ್ರಸ್ತಾವನೆಯನ್ನು ಪಡೆದು ಪರಿಶೀಲಿಸ ಲಾಗುವುದು.

ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

1.	ಬೆಂಗಳೂರು ಉತ್ತರ	:	04
2.	ಬೆಂಗಳೂರು ದಕ್ಷಿಣ	:	04
3.	ಚಿತ್ರದುರ್ಗ	:	41
4.	ಕೋಲಾರ	:	54
5.	ಶಿವಮೊಗ್ಗ	:	45
6.	ತುಮಕೂರು	:	32
7.	ಬೆಳಗಾಂ	:	10
8.	ಬಿಜಾಪುರ	:	03
9.	ಧಾರವಾಡ	:	53